Regd No BG 151 26-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶಿವಮೊಗ್ಗದಲ್ಲಿ ರೆಕಾರ್ಡ್ ನಾಪತ್ತೆ

ಡೆಟೆನೂಗಳ ಬಿಡುಗಡೆ

ಹೈದರಾಬಾದು— ಸ್ಥಾನಬದ್ಧ ಶಾಸನ ರೀತ್ಯಾ ಬಂಧಿಸಲ್ಪಟ್ಟಿದ್ದ ಡಾ॥ ಚೆನ್ನಾರೆಡ್ಡಿ, ಶ್ರೀ ಕೊಂಡಾ ಲಕ್ಷ್ಮಣ ಬಾಪೂಜಿ ಸೇರಿ 38 ಮಂದಿ ತೆಲಂಗಾಣಾ ಡೆಟೆನೂಗಳ ಬಿಡುಗಡೆಗೆ ಹೈ ಕೋರ್ಟು ಆರ್ಡರ್ ಮಾಡಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ. ಸಿ. ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ತತ್ಕೃಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4

ವಿಗ್ರಹ ಸಿಕ್ಕಿತು

ಬೆಂಗಳೂರು— ಧರ್ಮರಾಜಗುಡಿ ಬೀದಿಯಲ್ಲಿನ ಒಂದು ದೇವಾಲಯದಿಂದ ಕಳುವಾಗಿದ್ದ ಎರಡೂವರೆ ಅಡಿ ಎತ್ತರದ ಹಿತ್ತಾಳೆ ಉತ್ಸವ ಮೂರ್ತಿ ದೇವಾಲಯದ ಹತ್ತಿರದ ಬಚ್ಚಲಲ್ಲಿ ಸಿಕ್ಕಿದೆ.

★

ಸ್ಟೇಷ್ ಕೊಚ್ಚಿ ಹೋಯಿತು

ಪಾಟ್ನಾ— ಕಜಾರಿಯಾಘಾಟ್ ರೈಲೇ ಸ್ಟೇಷನ್ನಿನ ಕಟ್ಟಡದ ಒಂದು ಭಾಗವೂ ಅಂಗಳವೂ ಉಕ್ಕುತ್ತಿರುವೆ ಗಂಗಾನದಿಯಿಂದ ಕೊಚ್ಚಿ ಹೋದವು.

★

ಮಾರ್ಷಲ್ ಮೇಲಿನ ದೂರು

ಬೆಂಗಳೂರು— ಮಾರ್ಷಲ್ ತಮ್ಮ ಮೇಲೆ ನಡೆಸಿದ ಅಸಭ್ಯ ವರ್ತನೆ ಬಗ್ಗೆ ಶಾಸನ ಸಭಾ ಸದಸ್ಯ ಶ್ರೀ ಅಜೀಜ್ ಸೇಟ್ ಕೊಟ್ಟ ದೂರು ಹಕ್ಕುಬಾಧ್ಯತಾ ಸಮಿತಿಗೆ ಹಾಕಲಾಯಿತು.

★

ಜರೂಸೆಲಂ ಮಸೀದಿ

ಬೆಂಗಳೂರು— ಜರೂಸೆಲಮ್ಮಿನ ಪುರಾತನ ಮಸೀದಿಯನ್ನು ಇಸ್ರೇಲಿ ಪಡೆಗಳು ಕೆಡಿಸಿದ್ದ ಬಗ್ಗೆ ಲೋಕಸಭೆಯಲ್ಲಿ ಸರಕಾರಿ ಹೇಳಿಕೆಯನ್ನು ಕೇಳಿದಾಗ, ಈ ಕೇಳಿಕೆಯನ್ನು ಗುತ್ತು ಹಾಕಿಕೊಳ್ಳಲು ಪಾರ್ಲಿಮೆಂಟರಿ ಮಂತ್ರಿಗಳಿಗೆ ಸ್ಪೀಕರರು ತಿಳಿಸಿದರು.

★

ಹೌಸ್‌ಸರ್ಜನ್ನರು

ಬೆಂಗಳೂರು— ಸರ್ಕಾರಿ ಆಸ್ಪತ್ರೆಯಲ್ಲಿ ಹೌಸ್‌ಸರ್ಜನ್ನರ ಮುಷ್ಕರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕೇಳಿಕೆ ಬಂದಿದ್ದು ಸರಕಾರ ಈ ವಿಚಾರದಲ್ಲಿ ಹೇಳಿಕೆ ಕೊಡುವುದಾಗಿ ಶಾಸನ ಸಭೆಯಲ್ಲಿ ತಿಳಿಸಲಾಯಿತು.

ತಾಯ್ಲ್ಯಾಂಡು ಅಕ್ಕಿ

ನವದೆಹಲಿ— ತಾಯ್ಲ್ಯಾಂಡಿನಿಂದ ಮತ್ತೆ 25000 ಟನ್ ಅಕ್ಕಿಯನ್ನು ಈ ವರ್ಷ ಭಾರತ ಕೊಳ್ಳುತ್ತದೆ.

★

ರಾಜ್ಯದ ವಿಭಜನೆ

ಬೆಂಗಳೂರು— ರಾಜ್ಯದ ವಿಭಜನೆ ಬಗ್ಗೆ ನಿನ್ನೆ ವಿಧಾನ ಪರಿಷತ್ತಿನಲ್ಲಿ ಸದಸ್ಯರು ಪರ ಮತ್ತು ವಿರುದ್ಧ ಅಭಿಪ್ರಾಯ ವ್ಯಕ್ತ ಪಡಿಸಿದರು.

★

ರೆಕಾರ್ಡು ನಾಪತ್ತೆ

ಶಿವಮೊಗ್ಗ— ಮುನಿಸಿಪಲ್ ಆಫೀಸಿನಿಂದ ಮುಖ್ಯವಾದ ಲ್ಯಾಂಡ್ ರೆಕಾರ್ಡು ನಾಪತ್ತೆಯಾಗಿದೆ.

○

ಕೊಂಬುಗಳಿಗಾಗಿ ಆನೆ ಕೊಲೆ

ಮಡಕೇರಿ— ಕೊಲಂಗೇರಿ ರಿಜರ್ವು ಅರಣ್ಯದಲ್ಲಿ ಒಂದು ಆನೆ ಕೊಂದು ಅದರ ಕೊಂಬುಗಳನ್ನು ತೆಗೆದುಕೊಂಡು ಹೋಗಿರುವದು ಪತ್ತೆಯಾಗಿದೆ.

○

ಹೌಸ್‌ಸರ್ಜನ್ನರ ಮುಷ್ಕರ

ಬೆಂಗಳೂರು— ಹೌಸ್‌ಸರ್ಜನ್ನರ ಕೇಳಿಕೆಗೆ ಬೆಂಬಲಿಸಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಮುಂದುವರಿಸಿರುವರು — ಇಂದು ವಿಧಾನಸೌಧದ ಮುಂದೆ ಪ್ರದರ್ಶನ ನಡೆಸಲಿರುವರು.

★

ಬೆಂಗಳೂರು— ತ್ಯಾಗಿಯವರ ನೇತೃತ್ವದ ಆರ್ಥಿಕ ಕಮಿಷನ್ನಿನಿಂದ ಮೈಸೂರಿಗೆ ನ್ಯಾಯ ಸಿಗೊರೆಯಲಿಲ್ಲವೆಂದು ಆರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆ ಹೇಳಿದರು.

ಹಣ ಸಾಧನೆಯಾಗಲಿಲ್ಲ

ನವದೆಹಲಿ— ಕಾಂಗ್ರೆಸ್ ಒಡೆಯುವಿಕೆಯ ಉತ್ಕಟ ಪರಿಸ್ಥಿತಿಯು ತಪ್ಪಿತು — ನಿನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮಾಡಿದ ಎರಡು ತರಾವುಗಳು ರಾಜಿಗೆ ಮೂಲವಾದವು — ಅಂಚೆ ಪ್ರಧಾನಿ ಇಂದಿರಾ ಮತ್ತಿತರರ ಮೇಲೆ ಯಾವ ಕಾರ್ಯಕ್ರಮವೂ ಇಲ್ಲದಂತಾಯಿತು — ಆದರೆ ಇದು ಮೊರಾರ್ಜಿ ದೇಸಾಯಿ ಮತ್ತು ಕಾಮರಾಜರಿಗೆ ತೃಪ್ತಿಯುಂಟುಮಾಡಿಲ್ಲ.

★

ಗೇರಾವೋ ಮತ್ತು ಡಾಕ್ಟರಿಲ್ಲದ್ದು

ನವದೆಹಲಿ— ಜನವರಿ 1 ರಿಂದ 13 ಸರಕಾರಿ ಕೈಗಾರಿಕೆಗಳಲ್ಲಿ 51 ಘೇರಾವೋ ನಡೆದವು ; ದೇಶದಲ್ಲಿನ 4919 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 352 ರಲ್ಲಿ ಡಾಕ್ಟರುಗಳಿಲ್ಲವೆಂದು ತಿಳಿಸಲಾಯಿತು. ತ್ಯಾಗಿಯವರಿಂದ ನ್ಯಾಯ ದೊರೆಯಲಿಲ್ಲ

●

ಮಾತಾಡುವ ಸಂಖ್ಯೆಗಳು

ಕಳೆದ 16 ವರ್ಷಗಳಿಂದ ಸಂಪಾದನೆ ತೀರ್ಕಡ 81 ಕ್ಕೂ ಹೆಚ್ಚಿದ್ದರೂ, ಬೆಲೆಯು 115 ಕ್ಕೂ ಹೆಚ್ಚಿದೆ.

●

ಪೇ ಕಮಿಷನ್

ಬೆಂಗಳೂರು— ಪೇ ಕಮಿಷನ್ ವರದಿಯನ್ನು ಜಾರಿಗೆ ತಂದರೆ ಸರಕಾರಕ್ಕೆ ವರ್ಷಕ್ಕೆ ರೂ 22.23 ಕೋಟಿ ಖರ್ಚು ಬೀಳುವುದೆಂದು ಹೇಳಿದರು.

★

ನೆಕ್ಸಲೈಟರ ಕೊಲೆ

ಹೈದರಾಬಾದು— ಕೋಡಬಾರಿದಿ ಬಿಟ್ಟಗಳಲ್ಲಿ ಪೋಲೀಸರಿಗೂ ನಕ್ಸಲೈಟರಿಗೂ ಆದ ಘರ್ಷಣೆಯಲ್ಲಿ ಇಬ್ಬರು ನಕ್ಸಲೈಟರು ಕೊಲ್ಲಲ್ಪಟ್ಟರು.

ಗುರು ನಾನಕರ ಐದನೂರನೆ ಜನ್ಮದಿನೋತ್ಸವ

ನವದೆಹಲಿ— ಗುರು ನಾನಕರ ಐದನೂರನೇ ಜನ್ಮದಿನೋತ್ಸವದ ರಾಷ್ಟ್ರೀಯ ಸಮಿತಿ ಇತ್ತೀಚೆಗೆ ಇಲ್ಲಿ ಪ್ರಧಾನ ಮಂತಿ ಶ್ರೀಮತಿ ಇಂದಿರಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಧಾರ್ಮಿಕ ಸಹಿಷ್ಣುತೆ ಹಾಗೂ ಜಾತ್ಯಾತೀತ ಆದರ್ಶ ಇವುಗಳ ಬಗ್ಗೆ ಗುರು ನಾನಕರು ತಮ್ಮ ಉಪದೇಶಗಳಲ್ಲಿ ತಿಳಿಸಿದ್ದಾರೆ. ಸಮಾಜವಾದಿ ಸಮಾಜದ ಬಗ್ಗೆ ದಿವ್ಯ ಭವನ್ನು ಹೊಂದಿದವರಲ್ಲಿ ಶ್ರೀ ಗುರು ನಾನಕರೂ ಒಬ್ಬರು. ಕರ್ತವ್ಯ, ಭಕ್ತಿ ಮತ್ತು ಅದಾಯವನ್ನು ಹಂಚಿಕೊಳ್ಳುವುದು, ಇವು ಅವರ ಮುಖ್ಯ ಸಂದೇಶಗಳು ಎಂದು ಡಾ ॥ ರಾವ್ ತಿಳಿಸಿದರು.

ಗಾಂಧೀಜೀ ಅಮೃತವಾಣಿ

ನಾಳಿನ ಪ್ರಪಂಚದ ಸಮಾಜವು ಅಹಿಂಸೆಯಿಂದ ಕೂಡಿರುತ್ತದೆ, ಕೂಡಿರಲೇ ಬೇಕು ಎಂಬ ವಿಷಯದಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ಅಹಿಂಸೆಯ ವಿಷಯದ ಬಗ್ಗೆ ನಾವು ನಮ್ಮ ಜನತೆಗೆ ಶಿಕ್ಷಣ ನೀಡಬೇಕಾಗಿದೆ ಅಂದರೆ ಸಹಜವಾಗಿ ಅವರಿಗೆ ಸತ್ಯದ ಬಗೆಗೂ ಶಿಕ್ಷಣ ಸಿಕ್ಕೆಸಿಗುತ್ತದೆ.

ಜಯಾಪಜಯಗಳು ನಮ್ಮ ಕೈಯಲ್ಲಿಲ್ಲ : ನಮ್ಮ ಕೆಲಸಗಳನ್ನು ನಾವು ಸರಿಯಾಗಿ ಮಾಡಿದ್ದರೆ ಸಾಕು ; ಪ್ರಯತ್ನ ನಮ್ಮದು ; ಕೊನೆಯಲ್ಲಿ ಭಗವದಿಚ್ಛೆಯಂತೇ ಎಲ್ಲವೂ ನಡೆಯುವುದು.

ವಿವಾಹಮಹೋತ್ಸವ:

ಚಿ ॥ ಅನಂತಸತ್ಯನಾರಾಯಣ (ಹೊಂಗನೂರು ಶ್ರೀ ಅನಂತನಾರಾಯಣ ಜೋಯಿಸರ ಪುತ್ರ) ಮತ್ತು ಸೌ ॥ ವಿಜಯಲಕ್ಷ್ಮಿ (ಬೆಳ್ಳೂರು ಅರ್ಚಕ ಶ್ರೀ ರಾಜಯಂಗಾರ್ಯರ ಪುತ್ರಿ) ಇವರ ವಿವಾಹಮಹೋತ್ಸವವು ಬೆಳ್ಳೂರಿನಲ್ಲಿ ಸೋಮವಾರ ನೆರವೇರಿತು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M.B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 1.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 5 ನೇ ವಾರ

— ಹುನ್ನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ— ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲ್ಕ

ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

ಅಮೋಘ ಆಕರ್ಷಣೀಯ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್

ಸಪ್‌ನೋನ್ ಕ ಸೌದಾಗರ

ನಟವರ್ಗ— ರಾಜಕಪೂರ್, ಹೇಮಮಾಲಿನಿ

ಸಂಗೀತ : ಶಂಕರ್ ಜೈಕಿಷನ್

ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana

ಗೋರಕ್ಷಣೆ ಮತ್ತು ವಾಣಿಜ್ಯ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಹೆಂಚಲು ಫೀಡಿ

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore 1